**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**<u>ಪಿ.ಸಿ.ಆರ್. ನಂ. 24/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೃಷ್ಣೇಗೌಡ ಸಿ. |
| ತಂದೆಯ  ಹೆಸರು | : | ಚಲುವೇಗೌಡ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕ್ಯಾತನಹಳ್ಳಿ ಗ್ರಾಮ,  ಹೆಚ್.ಡಿ.  ಕೋಟೆ ತಾ. |

**<u>ಸಾಕ್ಷಿಯನ್ನು ದಿನಾಂಕಃ 21.05.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಭಾರತ ದಂಡ ಪ್ರಕ್ರಿಯೆ ಸಂಹಿತೆ ಕಲಂ 200 ಸಹವಾಚಕ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ರಡಿಯಲ್ಲಿ ಪಿರ್ಯಾದುದಾರರನ ಸಾಕ್ಷಿದಾರರ ಪ್ರಮಾಣ ಪೂರ್ವ ಹೇಳಿಕೆಃ ಪಿರ್ಯಾದಿ ಪರ ಶ್ರೀ. ಸ್ವಾಮಿ / ಶ್ರೀ. ಬಿ.ಹೆಚ್.ಆರ್. ವಕೀಲರಿಂದಃ</u>**

ನಾನು ಹೆಚ್.ಡಿ. ಕೋಟೆಯ ಕ್ಯಾತನಹಳ್ಳಿ ಗ್ರಾಮದ ವಾಸಿಯಾಗಿದ್ದು, ವ್ಯವಸಾಯ ಮಾಡಿಕೊಂಡಿರುತ್ತೇನೆ. ದಿನಾಂಕಃ 07.03.2023 ರಂದು ಮಧ್ಯಾಹ್ನ ನನ್ನ ಮೊಬೈಲ್ ಗೆ ಹಳ್ಳದಮನುಗನಹಳ್ಳಿ ಗ್ರಾಮದ ಆನಂದ್ ಹೆಚ್.ವಿ. ರವರು 01 ಆಡಿಯೋ ಕಳುಹಿಸಿದ್ದು ಅದನ್ನು ಕೇಳಿದಾಗ ಸದರಿ ಆಡಿಯೋದಲ್ಲಿ ಹೆಚ್.ಡಿ. ಕೋಟೆಯ ಪೋಲೀಸ್ ಠಾಣೆಯ ಪಿ.ಎಸ್.ಐ. ಆದಂತಹ ರಸೂಲ್ ಪಾಗೇವಾಲರವರು ನಮ್ಮ ಪರಿಚಿತರಾದ ಯತೀಶ್ ಕುಮಾರ್ ರವರಿಗೆ ಬೋಳೀಮಗನೇ, ಸೂಳೇಮಗನೇ ಎಂದೆಲ್ಲಾ ಬೈದಿರುವುದು ಕಂಡುಬಂದಿರುತ್ತದೆ. ನಂತರ ನಾನು ಯತೀಶ್ ಕುಮಾರ್ ರವರಿಗೆ

ಫೋನ್ ಮಾಡಿ ಸದರಿ ವಿಚಾರವನ್ನು ತಿಳಿಸಿದ್ದು ಅವರು ಆ ಬಗ್ಗೆ ತನಗೆ ಗೊತ್ತಿಲ್ಲವೆಂದು ತಿಳಿಸಿದ್ದು ನಂತರ ನಾನು ಅವರ ಬಳಿಗೆ ಹೋಗಿ ನನ್ನ ಮೊಬೈಲ್ ನಿಂದ ಆಡಿಯೋವನ್ನು ಅವರಿಗೆ ಕೇಳಿಸಿರುತ್ತೇನೆ. ನಂತರ ನಾನು, ಯತೀಶ್ ಕುಮಾರ್ ಹಾಗು ರವಿ ರವರು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಹೋಗಿದ್ದು ಅಲ್ಲಿ ಯತೀಶ್ ಕುಮಾರ್ ರವರು ಈ ಬಗ್ಗೆ ಪಿ.ಎಸ್.ಐ. ಆದಂತಹ ರಸೂಲ್ ಪಾಗೇವಾಲರವರಲ್ಲಿ ಏಕೆ ನನಗೆ ಏನೇನೋ ಬೈಯುತ್ತಿದ್ದೀರಾ ಎಂದು ಕೇಳಿದ್ದು ಆಗ ಅವರು ಯತೀಶ್ ಕುಮಾರ್ ರವರಿಗೆ ಮತ್ತೆ ಬೋಳೀಮಗನೇ, ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಾನು ಹೇಳಿದ ಹಾಗೆ ಕೇಳದಿದ್ದರೆ ನಿನ್ನನ್ನು ಜೈಲಿಗೆ ಕಳುಹಿಸುತ್ತೇನೆಂದು ಬೈದಿರುತ್ತಾರೆ. ನಂತರ ನಾನು ಹಾಗು ಯತೀಶ್ ಕುಮಾರ್ ರವರು ಮೈಸೂರಿನ ಎಸ್.ಪಿ. ಕಛೇರಿಗೆ ಹೋಗಿ ಯತೀಶ್ ಕುಮಾರ್ ರವರು ದೂರನ್ನು ನೀಡಿದ್ದು ಅವರು ಹುಣಸೂರಿನ ಡಿ.ವೈ.ಎಸ್.ಪಿ.ರವರಿಗೆ ಕರೆ ಮಾಡಿ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ. ನಂತರ ಮರುದಿನ ನಾನು ಹಾಗು ಯತೀಶ್ ಕುಮಾರ್ ರವರು ಡಿ.ವೈ.ಎಸ್.ಪಿ. ಕಛೇರಿಗೆ ಹೋಗಿದ್ದು ಅವರು ಅಲ್ಲಿ ಆಡಿಯೋ ರೆಕಾರ್ಡಿಂಗ್ ಅನ್ನು ಕೇಳಿಕೊಂಡು ತಕ್ಷಣ ಸರ್ಕಲ್ ಇನ್ಸ್ ಪೆಕ್ಟರ್ ರವರಿಗೆ ಕರೆ ಮಾಡಿ ಪಿ.ಎಸ್.ಐ. ರಸೂಲ್ ಪಾಗೇವಾಲರವರು ಮಾಡಿರುವುದು ತಪ್ಪು ಅವರ ವಿರುದ್ಧ ತಕ್ಷಣ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿರುತ್ತಾರೆ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**